ಸಂಪುಟ : 40 ಸಂಚಿಕೆ 126 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 02 ಜೂನ್ 2017 ಶುಕ್ರವಾರ POST REG NO . L-2/RNP- 364/TMR/2015-17 ಪುಟಗಳು : 10 ಬೆಲೆ ₹ 2.50

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟಿತ

ಪ್ರಜಾ ಪ್ರಗತಿ

ತುಮಕೂರು | Tumakuru

ಸಂಪಾದಕರು : ಎಸ್. ನಾಗಣ್ಣ

E-mail : prajapragathi1@gmail.com
Web : prajapragathi.com



ರಾಜ್ಯದ 6ನೇ ವೇತನ ಆಯೋಗದ ಅಧ್ಯಕ್ಷರಾಗಿ ಎಂ.ಆರ್. ಶ್ರೀನಿವಾಸಮೂರ್ತಿ ನೇಮಕ

ವಿವರ ಪುಟ : 05



2018 ಕ್ಕೆ ಉಡಾವಣೆ : ಸೂರ್ಯನ ಮುಟ್ಟಲಿದೆ ನಾಸಾದ ಪಾರ್ಕರ್ ನೌಕೆ

ವಿವರ ಪುಟ : 05

ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್: ಇಂದು ಮಧ್ಯಾಹ್ನ 3ಕ್ಕೆ ಆಸ್ಟ್ರೇಲಿಯಾ–ನ್ಯೂಜಿಲೆಂಡ್ ನಡುವೆ ಪಂದ್ಯ

₹55 Discount Per Gram
Gold 916 ₹ 2730/-
Silver ₹ 41000/-
ಸೂರ ಜ್ಯುಯಲರ್ಸ್
Ashoka Road, Tumkur
Ph: 0816 4022274

ರಾಜೀನಾಮೆ

ಬೆಂಗಳೂರು

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಮತ್ತೊಂದು ಅವಧಿಗೆ ನೇಮಕಗೊಂಡಿರುವ ಡಾ.ಜಿ.ಪರಮೇಶ್ವರ್ ಈವರೆಗೆ ನಿರ್ವಹಿಸುತ್ತಿರುವ ಗೃಹ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಮುಖ್ಯಮಂತ್ರಿಗಳ ನಿವಾಸ ಕಾವೇರಿಯಲ್ಲಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ಪರಮೇಶ್ವರ್, ಸಚಿವ ಸ್ಥಾನಕ್ಕೆ ತಮ್ಮ ತ್ಯಾಗಪತ್ರ ಸಲ್ಲಿಸಿದರು.

ಕೆಪಿಸಿಸಿ ಅಧ್ಯಕ್ಷರಾಗಿ ಮತ್ತೊಂದು ಅವಧಿಗೆ ಮುಂದುವರೆಸಿರುವ ಹಿನ್ನೆಲೆಯಲ್ಲಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಹೈಕಮಾಂಡ್ ಸೂಚನೆ ನೀಡಿತ್ತು. ಈ ಹಿನ್ನೆಲೆಯಲ್ಲಿ ಪರಮೇಶ್ವರ್, ಪಕ್ಷದ ಸಂಘಟನೆಗೆ ಒತ್ತು ನೀಡುವುದಲ್ಲದೆ ಸರ್ಕಾರಕ್ಕೂ ಎಲ್ಲ

>>> 6ನೇ ಪುಟಕ್ಕೆ

ಜಗತ್ತಿಗೆ ಸಂದೇಶ ನೀಡಿದ ನೇಗಿಲಯೋಗಿ

ಕುವೆಂಪು ನಾಟಕೋತ್ಸವಕ್ಕೆ ಚಾಲನೆ ನೀಡಿ ಸಂಸದ ಮುದ್ದಹನುಮೇಗೌಡ ನುಡಿ

ತುಮಕೂರು

ಕುವೆಂಪು ನೆನೆಯದೆ ಯಾವುದೇ ಚಿಂತನೆ ಸಾಧ್ಯವೇ ಇಲ್ಲ ಎಂದು ಸಂಸತ್ ಸದಸ್ಯ ಎಸ್.ಪಿ.ಮುದ್ದಹನುಮೇಗೌಡರು ಅಭಿಪ್ರಾಯಪಟ್ಟರು.

ಅವರು ಗುರುವಾರ ಸಂಜೆ ನಗರದ ಗುಬ್ಬಿ ವೀರಣ್ಣ ಕಲಾಕ್ಷೇತ್ರದಲ್ಲಿ ಕುವೆಂಪು ನಾಟಕೋತ್ಸವವನ್ನು ಉದ್ಘಾಟಿಸಿ ಮಾತನಾಡಿದರು.

ಲೋಕಸಭೆಯಲ್ಲಿ ಕೃಷಿ ಕುರಿತು ಚರ್ಚೆಗೆ ಅವಕಾಶ ದೊರೆತಾಗ ನಾನು ಕುವೆಂಪುರವರ ನೇಗಿಲಯೋಗಿ ಕವಿತೆಯ ಯಾರೂ ಅರಿಯದೆ ನೇಗಿಲ ಯೋಗಿಯೇ ಲೋಕಕೆ ಅನ್ನವ ನೀಡುವನು ಎಂಬ ಸಾಲಿನ ಹಿನ್ನೆಲೆಯಲ್ಲಿ ಮಾತನಾಡಿದ್ದೆನು ಎಂದರು.

ನೇಗಿಲ ಯೋಗಿ ಕವಿತೆ ಇಡೀ ಜಗತ್ತಿಗೆ ಅನೇಕ ಸಂದೇಶವನ್ನು ನೀಡಿದೆ ಎಂದು ಅವರು ಸೂಚ್ಯವಾಗಿ ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ತುಮಕೂರು ವಿವಿ ಉಪಕುಲಪತಿ ಪ್ರೊ.ಎ.ಎಚ್.ರಾಜಾಸಾಬ್ ಮಾತನಾಡಿ ಮನುಜ ಚಿಂತನೆಯನ್ನು ಬದಲಿಸುವ ಶಕ್ತಿ ನಾಟಕಕ್ಕಿದೆ. ಗುಬ್ಬಿ ವೀರಣ್ಣನವರಿಂದ ಜಗತ್ಪ್ರಸಿದ್ಧವಾದ ತುಮಕೂರಿನಲ್ಲಿ ನಾಟಕ ಪ್ರದರ್ಶನಗೊಂಡರೆ ಅದು ಒಂದು ರೀತಿ ಟೆಸ್ಟ್ ಇದ್ದಂತೆ ಎಂದರು.

ಮಂಡ್ಯದ ಕರ್ನಾಟಕ ಕಲಾಸಂಘದ, ಕುವೆಂಪು ನಾಟಕೋತ್ಸವದ ರೂವಾರಿ ಪ್ರೊ.ಜಯಪ್ರಕಾಶಗೌಡ ಮಾತನಾಡಿ ಕುವೆಂಪುರವರ ರಾಮಾಯಣ ದರ್ಶನಂ ಮಹಾಕಾವ್ಯದ ಆಧಾರದಲ್ಲಿ ವಿದ್ಯಾಮಂತ್ರಿಗಳಾಗಿದ್ದ ಕೆ.ವಿ.ಶಂಕರೇಗೌಡರು ಪರಿಣಾಮಕಾರಿಯಾಗಿ ಪಾದುಕಾ ಕಿರೀಟಿ ನಾಟಕ ರಚಿಸಿದ್ದಾರೆ ಎಂದರು. ಇಂದು ಮತ್ತು ನಾಳೆ ಪ್ರದರ್ಶನವಾಗಲಿರುವ ಕುವೆಂಪುರವರ ಜಲಗಾರ ಮತ್ತು ಶೂದ್ರತಪಸ್ವಿ ನಾಟಕಗಳು ವರ್ಣಾಶ್ರಮ ಧರ್ಮವನ್ನು ಕಟು ವಿಮರ್ಶೆಗೆ

ವಿತ್ ಡ್ರಾ ಮಿತಿ ಕಡಿತ : ಹೆಚ್ಚುವರಿಗೆ ಶುಲ್ಕ

ನವದೆಹಲಿ

ಭಾರತವನ್ನು ಡಿಜಿಟಲೀಕರಣದತ್ತ ಕೊಂಡೊಯ್ಯುತ್ತಿರುವ ಕೇಂದ್ರ ಸಕಾರದ ಕ್ರಮದಿಂದಾಗಿ ಬ್ಯಾಂಕ್ ಗಳು ಗ್ರಾಹಕರ ಮೇಲೆ ವಿತ್ ಡ್ರಾ ಮಿತಿಯ ಬರೆ ಎಳೆಯಲು ಹೊರಟಿವೆ. ಇದೂವರೆಗೂ ಸಾಕಷ್ಟು ಬಾರಿ ವಿತ್ ಡ್ರಾ ಮಾಡಿಕೊಳ್ಳಬಹುದಾಗಿದ್ದ ಅವಕಾಶವನ್ನು ಕಿತ್ತುಕೊಂಡು ಈಗ ಕೇವಲ ತಿಂಗಳಿಗೆ ನಾಲ್ಕು ಬಾರಿಗೆ ಇಳಿಸಿರುವುದು ಶೋಚನೀಯ ಸಂಗತಿಯಾಗಿದೆ.

ಹಣ ವಿತ್ ಡ್ರಾ ಮೇಲೆ ಮಿತಿ ಹೇರಿರುವ ಭಾರತೀಯ ಸ್ಟೇಟ್ ಬ್ಯಾಂಕ್ ಕ್ರಮ ಗ್ರಾಹಕರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ. ನಾಲ್ಕು ಬಾರಿ ಮಾತ್ರ ಎಟಿಎಂಗಳಿಂದ ಕ್ಯಾಶ್ ವಿತ್ ಡ್ರಾ ಮಾಡಿಕೊಳ್ಳಲು ತನ್ನ ಗ್ರಾಹಕರಿಗೆ ಅವಕಾಶ ನೀಡಿದೆ. ಜೂನ್ 1 ರಿಂದಲೇ ಈ ನಿಯಮ ಜಾರಿಗೆ ಬಂದಿದೆ.

ನಾಲ್ಕು ಬಾರಿ ಹಣ ಡ್ರಾಗೆ ಅವಕಾಶವಿದ್ದು, ಈ ನಂತರ ಹಣ ಡ್ರಾ ಮಾಡಿಕೊಂಡರೆ ಹೆಚ್ಚುವರಿ ಶುಲ್ಕವನ್ನು ತೆರಬೇಕಾಗುತ್ತದೆ. ಎಟಿಎಂ ವಿತ್ ಡ್ರಾ ಜೊತೆಗೆ ಹಣ ವರ್ಗಾವಣೆ, ಚೆಕ್ ಬುಕ್ ವಿತರಣೆ ಮೇಲೂ ಹೆಚ್ಚುವರಿ ಶುಲ್ಕ ವಿಧಿಸಲು ಎಸ್‌ಬಿಐ ಮುಂದಾಗಿದೆ.

ಸೇವಾ ಉದ್ದೇಶದೊಂದಿಗೆ ಸರಕಾರವೇ ಸ್ಥಾಪಿಸಿದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇಂದಿನಿಂದ ಸೇವೆ ಬಿಟ್ಟು ಅಕ್ಷರಶಃ ಹಗಲುದರೋಡೆಗೆ ನಿಂತಿರುವಂತಿದೆ. ಜೂನ್ 1ರಿಂದ ಹೊಸ ಸೇವಾ ವೆಚ್ಚಗಳನ್ನು ವಿಧಿಸಲು ಬ್ಯಾಂಕ್ ನಿರ್ಧರಿಸಿದೆ.

ಯಾವ್ಯಾವುದಕ್ಕೆ ಎಷ್ಟು ಶುಲ್ಕ..

ತಿಂಗಳಲ್ಲಿ 5 ನೇ ಬಾರಿ ಎಟಿಎಂಗಳಲ್ಲಿ ಹಣ ಪಡೆದರೆ 50 ರೂ. ಮತ್ತು ಸೇವಾ ತೆರಿಗೆ ಅನ್ವಯ

- **ಬೇರೆ ಬ್ಯಾಂಕ್ ಎಟಿಎಂಗಳಲ್ಲಿ ಹಣ ಪಡೆದರೆ 20 ರೂ. ಮತ್ತು ಸೇವಾ ತೆರಿಗೆ ಅನ್ವಯ, ಎಸ್‌ಬಿಐ ಎಟಿಎಂಗಳಲ್ಲಿ ಹಣ ಪಡೆದರೆ 10 ರೂ. ಶುಲ್ಕ ಮತ್ತು ಸೇವಾ ತೆರಿಗೆ ಅನ್ವಯ, ಎಸ್‌ಬಿಐ ಎಟಿಎಂಗಳಲ್ಲೇ ಹಣ ಪಡೆದರೆ 10 ರೂ ಶುಲ್ಕ ವಿಧಿಸಲಾಗುತ್ತದೆ.**

ಹಣ ವರ್ಗಾವಣೆ ಶುಲ್ಕ:

- **1 ಲಕ್ಷ ರೂ. ವರೆಗೆ ಹಣ ವರ್ಗಾವಣೆ - 5 ರೂ. ಮತ್ತು ಸೇವಾ ತೆರಿಗೆ ಅನ್ವಯ, 1 ರಿಂದ 2 ಲಕ್ಷ ರೂ. ವರೆಗೆ ಹಣ ವರ್ಗಾವಣೆ - 15 ರೂ. ಮತ್ತು ಸೇವಾ ತೆರಿಗೆ ಅನ್ವಯ, 2 ರಿಂದ 5 ಲಕ್ಷ ರೂ.ವರೆಗೆ ಹಣ ವರ್ಗಾವಣೆಗೆ - 25 ರೂ. ಮತ್ತು ಸೇವಾ ತೆರಿಗೆ ಅನ್ವಯ**

ಚೆಕ್ ವಿತರಣೆಗೂ ಹೆಚ್ಚುವರಿ ಶುಲ್ಕ

- **10 ಚೆಕ್‌ಗಳುಳ್ಳ ಬುಕ್ ನೀಡಲು 30 ರೂ. ಮತ್ತು ಸೇವಾ ತೆರಿಗೆ ಅನ್ವಯ, 25 ಚೆಕ್ ಗಳಿರೋ ಬುಕ್‌ಗೆ 75 ರೂ. ಮತ್ತು ಸೇವಾ ತೆರಿಗೆ ಅನ್ವಯ, 50 ಚೆಕ್‌ಗಳಿರುವ ಬುಕ್ ನೀಡಲು ಬ್ಯಾಂಕ್ 150 ರೂ. ಮತ್ತು ಸೇವಾ ತೆರಿಗೆ ಅನ್ವಯ, 20 ನೋಟಿಗಿಂತ ಅಧಿಕ ಸಂಖ್ಯೆಯ ಹಳೆಯ/ ಹಾಳಾದ ನೋಟ್‌ಗಳನ್ನು ಬದಲಾಯಿಸಿಕೊಂಡಲ್ಲಿ ಒಂದು ನೋಟಿಗೆ 2 ರೂಪಾಯಿ ಇಲ್ಲವೇ ಒಂದು ಸಾವಿರಕ್ಕೆ 5 ರೂಪಾಯಿ ಶುಲ್ಕ ಪಡೆಯಲು ಬ್ಯಾಂಕ್ ತೀರ್ಮಾನಿಸಿದೆ.**

ಯು.ಪಿಎಸ್.ಸಿ: ಜಿಲ್ಲೆಯ ಸಾಧಕರು

ತುಮಕೂರು

ಕೇಂದ್ರ ನಾಗರಿಕ ಸೇವಾ ಪರೀಕ್ಷಾ ಫಲಿತಾಂಶ ಮೇ 31 ರಂದು ಪ್ರಕಟಗೊಂಡಿದ್ದು, ತುಮಕೂರು ಜಿಲ್ಲೆಯ ಹಲವಾರು ಅಭ್ಯರ್ಥಿಗಳು ವಿವಿಧ ರ್‍ಯಾಂಕ್‌ಗಳನ್ನು ಪಡೆಯುವ ಮೂಲಕ ಸಾಧನೆಯ ಪಟ್ಟಿಯಲ್ಲಿ ಸೇರಿದ್ದಾರೆ.

ತುಮಕೂರು ಶಿರಾಗೇಟ್‌ನಲ್ಲಿ ವಾಸವಾಗಿರುವ ಮಧುಗಿರಿ ತಾಲ್ಲೂಕು ಈ.ಜಿ.ಹಳ್ಳಿಯ ಪ್ರಿಯಾಂಕ ಜಿ. 84ನೇ ರ್‍ಯಾಂಕ್ ಗಳಿಸಿದ್ದಾರೆ.

ಕೀರ್ತಿಶ್ರೀ: ತುಮಕೂರು ರಾಮಜೋಯಿಷ್ ನಗರ ವಾಸಿಗಳಾದ ಗಂಗಯ್ಯ ಮತ್ತು ಲಕ್ಷ್ಮಿ ಅವರ ಪುತ್ರಿ ಕೀರ್ತಿಶ್ರೀ ಜಿ. 442ನೇ ರ್‍ಯಾಂಕ್ ಗಳಿಸಿದ್ದಾರೆ. ತಂದೆ ಗಂಗಯ್ಯ ಕುಣಿಗಲ್ ಸಿದ್ಧಾರ್ಥ ಪ್ರೌಢಶಾಲೆಯ ಮುಖ್ಯ ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಕೊರಟಗೆರೆ ತಾಲ್ಲೂಕು ದಾಸರಹಳ್ಳಿ ಬಳಿಯ ಗರುಗದೊಡ್ಡಿ ಗ್ರಾಮದ ಶಿಕ್ಷಕ ಗಂಗಯ್ಯ ಪ್ರಸ್ತುತ ತುಮಕೂರಿನಲ್ಲಿ ವಾಸವಾಗಿದ್ದಾರೆ ಕೀರ್ತಿಶ್ರೀ ಅವರ ಅಕ್ಕ ಡಾ.ಅಶ್ವಿನಿ ಚಾಮರಾಜನಗರದಲ್ಲಿ ನೇತ್ರತಜ್ಞರಾಗಿದ್ದಾರೆ. ಕೀರ್ತಿಶ್ರೀ ಈ ಹಿಂದೆ ಕೊರಟಗೆರೆಯ ಕನ್ಯಕಾ ವಿದ್ಯಾಪೀಠದಲ್ಲಿ, ತುಮಕೂರಿನ ಸರ್ವೋದಯ ಪಿ.ಯು. ಕಾಲೇಜಿನಲ್ಲಿ ವ್ಯಾಸಂಗ ಮಾಡಿದ್ದರು. ಇದೇ ತುಮಕೂರಿನ ಎಸ್.ಐ.ಟಿ.ಯಲ್ಲಿ ಇಂಜಿನಿಯರಿಂಗ್ (ಸಿ.ಎಸ್.) ವ್ಯಾಸಂಗ ಮಾಡಿ ಇದೀಗ ಯುಪಿಎಸ್‌ಸಿನಲ್ಲಿ 442ನೇ ರ್‍ಯಾಂಕ್ ಗಳಿಸಿದ್ದಾಳೆ.

ನಿತನ್ ರಾಜ್: ತುಮಕೂರು ವಾಲ್ಮೀಕಿ ನಗರದ ನಿತನ್ ರಾಜ್ 476ನೇ ರ್‍ಯಾಂಕ್ ಗಳಿಸಿದ್ದಾರೆ. ತಂದೆ ನಾಗರಾಜ್ ನಿವೃತ್ತ ಇಂಜಿನಿಯರ್. ತಾಯಿ ಜಯಮ್ಮ. ತುಮಕೂರು ಟಿ.ವಿ.ಎಸ್.ಶಾಲೆಯಲ್ಲಿ ವ್ಯಾಸಂಗ ಮುಗಿಸಿ ಬೆಂಗಳೂರಿನ ಆರ್.ವಿ. ಕಾಲೇಜಿನಲ್ಲಿ ಇಂಜಿನಿಯರಿಂಗ್ (ಎಲೆಕ್ಟ್ರಿಕಲ್) ವ್ಯಾಸಂಗ ಮಾಡಿದ್ದರು. ಕಳೆದ ಬಾರಿಯೂ ಕೇಂದ್ರ ನಾಗರಿಕ ಸೇವಾ ಪರೀಕ್ಷೆ ಬರೆದಿದ್ದ ನಿತನ್ ರಾಜ್ 843ನೇ ರ್‍ಯಾಂಕ್ ಗಳಿಸಿದ್ದರು. ಈ ಬಾರಿ ಐ.ಆರ್.ಎಸ್. ಸೇವೆ ಸಿಗಬಹುದು ಎಂಬ ಅಪೇಕ್ಷೆಯಲ್ಲಿದ್ದಾರೆ. ದೆಹಲಿಯಲ್ಲಿ ಕೆಲವು ದಿನ ಉಳಿದು ವ್ಯಾಸಂಗ ಮಾಡಿದ್ದೇನೆ. ಸ್ನೇಹಿತರ ಜೊತೆ ಚರ್ಚಿಸಿ ಕೆಲವು ವಿಷಯಗಳನ್ನು ವಿನಿಯಮ ಮಾಡಿಕೊಂಡಿದ್ದೇನೆ. ಹೀಗಾಗಿ ಈ ಬಾರಿ 476 ರ್‍ಯಾಂಕ್ ಪಡೆಯಲು ಸಾಧ್ಯವಾಯಿತು ಎನ್ನುತ್ತಾರೆ ನಿತನ್.

ಕೆಂಪಹೊನ್ನಯ್ಯ: ಕುಣಿಗಲ್ ತಾಲ್ಲೂಕು ಹುಲಿಯೂರುದುರ್ಗ ಹೋಬಳಿ ಚೌಡನಕುಪ್ಪೆ ಗ್ರಾಮದ ಕೆಂಪಹೊನ್ನಯ್ಯ ಹುಟ್ಟು ಅಂಧನಾಗಿ ಮಾಡಿರುವ ಸಾಧನೆ

>>> 6ನೇ ಪುಟಕ್ಕೆ

ಪಾಲಿಕೆ: ಸ್ಥಾಯಿ ಸಮಿತಿ ಅಧ್ಯಕ್ಷರುಗಳ ಕಾರು ವಾಪಸ್

ತುಮಕೂರು

ತುಮಕೂರು ಮಹಾನಗರ ಪಾಲಿಕೆಯ ನಾಲ್ಕು ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳಿಗೆ ನೀಡಿದ್ದ ವಾಹನ ಸೌಲಭ್ಯವನ್ನು ಹಿಂಪಡೆಯಲಾಗಿದೆ.

ಮಹಾನಗರ ಪಾಲಿಕೆಯಲ್ಲಿ ತೆರಿಗೆ ನಿರ್ಧರಣೆ ಮತ್ತು ಹಣಕಾಸು ಸ್ಥಾಯಿ ಸಮಿತಿ, ಲೆಕ್ಕಪತ್ರಗಳಿಗಾಗಿ ಸ್ಥಾಯಿ ಸಮಿತಿ, ನಗರ ಯೋಜನೆ ಮತ್ತು ಸುಧಾರಣೆ ಸ್ಥಾಯಿ ಸಮಿತಿ, ಸಾರ್ವಜನಿಕ ಆರೋಗ್ಯ ಶಿಕ್ಷಣ ಮತ್ತು ಸಾಮಾಜಿಕ ನ್ಯಾಯಕ್ಕಾಗಿ ಸ್ಥಾಯಿ ಸಮಿತಿ ಎಂಬ ನಾಲ್ಕು ಸ್ಥಾಯಿ ಸಮಿತಿಗಳಿದ್ದು, ಈ ಸಮಿತಿಗಳ ಅಧ್ಯಕ್ಷರುಗಳಿಗೆ ನೀಡಲಾಗಿದ್ದ ವಾಹನ (ಕಾರು) ಸೌಲಭ್ಯವನ್ನು ಮಹಾನಗರ ಪಾಲಿಕೆಯ ಆಯುಕ್ತರು ಮೇ 26 ರಂದು ಜ್ಞಾಪನ ಪತ್ರ (ಸಂಖ್ಯೆ: ತುಮಪಾ/ ಆಶಾ/ಸಿಆರ್/2017-18, ದಿನಾಂಕ: 26.05.2017) ನೀಡಿ ವಾಪಸ್ ಪಡೆದಿದ್ದಾರೆ.

ರಾಜ್ಯದ ಪೌರಾಡಳಿತ ನಿರ್ದೇಶಕರು ಮೇ 22 ರಂದು ಬರೆದಿದ್ದ ಪತ್ರ (ಸಂಖ್ಯೆ: 20437/ಪೌನಿ/ಮನಪಾ/ಇಎಸ್ಟಿ/ಸಿಆರ್/2017-18, ದಿನಾಂಕ: 22.05.2017) ದಲ್ಲಿ ಸ್ಥಾಯಿ ಸಮಿತಿ ಅಧ್ಯಕ್ಷರುಗಳು ಹಾಗೂ ವಿಪಕ್ಷನಾಯಕರುಗಳಿಗೆ ನೀಡಿರುವ ವಾಹನ ಸೌಲಭ್ಯವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಿಂಪಡೆಯಲು ಸೂಚಿಸಿದ್ದ ಹಾಗೂ ಈ ಸೂಚನೆಯನ್ನು ಪಾಲಿಸುವಲ್ಲಿ ವಿಫಲರಾಗುವ ಅಧಿಕಾರಿ–ನೌಕರರುಗಳು ಮುಂದಿನ ಪರಿಣಾಮಗಳಿಗೆ ನೇರ ಜವಾಬ್ದಾರರಾಗುತ್ತಾರೆಂದು ಎಚ್ಚರಿಕೆ ನೀಡಿದ್ದ ಹಿನ್ನೆಲೆಯಲ್ಲಿ ಆಯುಕ್ತರು ಈ ಕ್ರಮ ಕೈಗೊಂಡಿದ್ದಾರೆ.

ತುಮಕೂರು ಪಾಲಿಕೆಯ ಮೇಯರ್‌ಗೆ ಮತ್ತು ಉಪಮೇಯರ್‌ಗೆ ಸರ್ಕಾರಿ ಕಾರಿನ ಸೌಲಭ್ಯ ಇದೆ. ಆದರೆ ನಾಲ್ಕು ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳಿಗೆ ಹೊರಗುತ್ತಿಗೆ ಮೂಲಕ ಕಾರನ್ನು ಬಾಡಿಗೆಗೆ ಪಡೆದು ವಾಹನ ಸೌಲಭ್ಯ ಒದಗಿಸಲಾಗಿತ್ತು. ಪ್ರತಿ ಕಾರಿಗೆ ತಿಂಗಳಿಗೆ ಅಂದಾಜು 30 ಸಾವಿರ ರೂಗಳನ್ನು ಬಾಡಿಗೆ ನೀಡಲಾಗುತ್ತಿತ್ತು. ತಮ್ಮ ಮನೆಯಿಂದ ಕಛೇರಿಗೆ ಬಂದು–ಹೋಗಲು ಹಾಗೂ ಪಾಲಿಕೆಯ ಕೆಲಸಗಳಿಗಾಗಿ ಈ ಕಾರುಗಳನ್ನು ಅಧ್ಯಕ್ಷರುಗಳು ಬಳಸುತ್ತಿದ್ದರು. ಆದರೆ ಇದೀಗ ಈ ವಾಹನ ಸೌಲಭ್ಯ ಹಿಂಪಡೆದಿರುವುದರಿಂದ ಅವರೆಲ್ಲರೂ ತಮ್ಮ ಸ್ವಂತ ವಾಹನಗಳಲ್ಲಿ ಪಾಲಿಕೆ ಕಛೇರಿಗೆ ಬಂದು–ಹೋಗುತ್ತಿದ್ದಾರೆ.

ತುಮಕೂರು ಪಾಲಿಕೆಯ ವಿರೋಧ ಪಕ್ಷದ ನಾಯಕರಿಗೂ ಈ ಸೌಲಭ್ಯ ಒದಗಿಸಬೇಕೆಂಬ ಬೇಡಿಕೆ ಇತ್ತಾದರೂ, ಈವರೆಗೆ ಒದಗಿಸಿರಲಿಲ್ಲ.

ಹಿಂದಿನ ತುಮಕೂರು ನಗರಸಭೆಯು ಮಹಾನಗರ ಪಾಲಿಕೆಯಾಗಿ ಮೇಲ್ದರ್ಜೆಗೇರಿದಾಗ ಗೀತಾ ರುದ್ರೇಶ್ ಅವರು ಮೇಯರ್ ಆದರು. ಅವರ ಅಧಿಕಾರಾವಧಿಯಲ್ಲಿ ಸ್ಥಾಯಿ ಸಮಿತಿಗಳು ಅಸ್ತಿತ್ವಕ್ಕೆ ಬಂದಿರಲಿಲ್ಲ. ಆದರೆ ನಂತರ ಲಲಿತಾ ರವೀಶ್ ಮೇಯರ್ ಆದ ಬಳಿಕ ಪಾಲಿಕೆಯಲ್ಲಿ ನಾಲ್ಕು ಸ್ಥಾಯಿ ಸಮಿತಿಗಳು ರಚನೆಗೊಂಡವು. ಆ ಬಳಿಕ ಪಾಲಿಕೆ ಸದಸ್ಯರು ಮೈಸೂರು ಮಹಾ ನಗರ ಪಾಲಿಕೆಗೆ ತೆರಳಿ ಅಲ್ಲಿನ ಕಾರ್ಯವಿಧಾನಗಳನ್ನು ಪರಿಶೀಲಿಸಿ ವಾಪಸ್ ಬಂದರು. ನಂತರ ಮೈಸೂರು ಮಾದರಿಯಲ್ಲಿ ಇಲ್ಲಿನ ಎಲ್ಲ ನಾಲ್ಕು ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳಿಗೂ ಬಾಡಿಗೆ ಕಾರಿನ ವ್ಯವಸ್ಥೆ ಮಾಡಿದ್ದು, ಆ ಪದ್ಧತಿ ಮುಂದುವರೆದಿತ್ತು. ಆದರೆ ಇದೀಗ ಅದೇ ಮೈಸೂರು ಪಾಲಿಕೆಯಲ್ಲಾದ ಒಂದು ಬೆಳವಣಿಗೆಯೇ ವಾಹನ ವಾಪಸ್‌ಗೆ ಕಾರಣವಾಗಿದೆ.

ನಿರ್ದೇಶಕರ ಪತ್ರದ ವಿವರ

ರಾಜ್ಯದ ಪೌರಾಡಳಿತ ನಿರ್ದೇಶಕರು ಮೈಸೂರು, ಹುಬ್ಬಳ್ಳಿ–ಧಾರವಾಡ, ಮಂಗಳೂರು, ತುಮಕೂರು, ಶಿವಮೊಗ್ಗ, ದಾವಣಗೆರೆ, ಬೆಳಗಾವಿ, ವಿಜಯಪುರ, ಕಲಬುರಗಿ ಮತ್ತು ಬಳ್ಳಾರಿ ಈ ಹತ್ತು ಮಹಾನಗರ ಪಾಲಿಕೆಗಳಿಗೂ ಅನ್ವಯವಾಗುವಂತೆ ಈ ಪತ್ರ ಬರೆದಿದ್ದಾರೆ. ಆ ಪತ್ರದ ವಿವರ ಕೆಳಕಂಡಂತಿದೆ:-

ಮೈಸೂರು ಮಹಾನಗರ ಪಾಲಿಕೆಯ ನಾಲ್ಕು ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳಿಗೆ, ಪುರಭವನ ಅಧ್ಯಕ್ಷರಿಗೆ ಹಾಗೂ ಮೂರೂ ಪಕ್ಷದ ನಾಯಕರುಗಳಿಗೆ ಹಲವಾರು ವರ್ಷಗಳಿಂದ ವಾಹನ ಸೌಲಭ್ಯವನ್ನು ಮಹಾನಗರ ಪಾಲಿಕೆ ವತಿಯಿಂದ ನೀಡಿರುವುದಾಗಿ ಉಲ್ಲೇಖಿತ ಪತ್ರದಲ್ಲಿ ತಿಳಿಸಿರುತ್ತಾರೆ.

ಆದರೆ ಮೈಸೂರು ಮಹಾನಗರ ಪಾಲಿಕೆಯ ಎಲ್ಲ ಶಾಸನಬದ್ಧವಾದ ಸ್ಥಾಯಿ ಸಮಿತಿಯ ಅಧ್ಯಕ್ಷರುಗಳಿಗೆ ಪಾಲಿಕೆ ವತಿಯಿಂದ ವಾಹನ ಸೌಲಭ್ಯ ನೀಡಲು ಕಾನೂನಿನಲ್ಲಿ ಅವಕಾಶವಿರುವ ಬಗ್ಗೆ ಸರ್ಕಾರದಿಂದ ಯಾವುದೇ ಸುತ್ತೋಲೆಯಾಗಲಿ ಅಥವಾ ಆದೇಶವಾಗಲಿ ಇಲ್ಲದಿರುವುದರಿಂದ ನಗರ ಪಾಲಿಕೆಯ 21ನೇ ವಾರ್ಡ್ ಸದಸ್ಯರೂ ಹಾಗೂ ಪಟ್ಟಣ ಯೋಜನೆ ಮತ್ತು ಸುಧಾರಣೆ ಸ್ಥಾಯಿ ಸಮಿತಿ ಅಧ್ಯಕ್ಷ ನಂದೀಶ್ ಪ್ರೀತಮ್ ಮತ್ತು ಲೆಕ್ಕಪತ್ರ ಸ್ಥಾಯಿ ಸಮಿತಿ ಅಧ್ಯಕ್ಷೆ ಸೀಮಾ ಪ್ರಸಾದ್‌ರವರು

>>> 6ನೇ ಪುಟಕ್ಕೆ

ಡೆಂಗ್ಯು–ಚಿಕುಂಗುನ್ಯ ಹೆಚ್ಚಳದ ಭೀತಿ

ಸಾ.ಚಿ.ರಾಜಕುಮಾರ

ತುಮಕೂರು

ಮಳೆಗೂ ಸೊಳ್ಳೆಗಳಿಗೂ ಬಹಳ ಹತ್ತಿರದ ನಂಟು. ಮಳೆಗಾಲ ಬಂದ ಕೂಡಲೇ ಸೊಳ್ಳೆಗಳ ಕಾಟವೂ ಹೆಚ್ಚಾಗುತ್ತದೆ. ಅಲ್ಲಲ್ಲಿ ಶೇಖರಣೆಯಾಗುವ ಮಳೆಯ ನೀರು ಸೊಳ್ಳೆಗಳ ಉತ್ಪತ್ತಿಗೆ ಆಶ್ರಯ ತಾಣವಾಗುತ್ತದೆ. ಇದೇ ಕಾರಣಕ್ಕಾಗಿ ಮೇ ಅಂತ್ಯದ ಭಾಗದಿಂದ ಆಗಸ್ಟ್‌ವರೆಗೆ ಡೆಂಗ್ಯು, ಚಿಕುಂಗುನ್ಯಾ, ಮಲೇರಿಯಾ ಮೊದಲಾದ ಕಾಯಿಲೆಗಳು ಹೆಚ್ಚಾಗಿ ಬಾಧಿಸುತ್ತವೆ.

ಜಿಲ್ಲೆಯಲ್ಲಿ ಈಗಾಗಲೇ ಕೆಲವು ಕಡೆ ಮಳೆಯಾಗಿದೆ. ತುಮಕೂರು ನಗರದಲ್ಲಿಯೂ ಒಮ್ಮೆ ಭರ್ಜರಿ ಮಳೆಯಾಗಿ ನೀರು ಅಲ್ಲಲ್ಲಿ ಶೇಖರಣೆಗೊಂಡಿದೆ. ಇವುಗಳ ಮೇಲೆಲ್ಲಾ ಸೊಳ್ಳೆಗಳು ಕುಳಿತು ಮೊಟ್ಟೆ ಹಾಕುವ ಕ್ರಿಯೆ ಆರಂಭವಾಗುತ್ತದೆ. ಹೀಗಾಗಿ ಜೂನ್ ತಿಂಗಳು ಸೊಳ್ಳೆಗಳಿಂದ ಬರುವ ಕಾಯಿಲೆಗಳಿಗೆ ಆಹ್ವಾನ ನೀಡಿದಂತೆ. ಈ ಅವಧಿಯಲ್ಲಿ ಎಷ್ಟು ಜಾಗ್ರತೆಯಿಂದ ಇರುತ್ತೇವೆಯೋ ಅಷ್ಟೂ ನಮ್ಮ ಆರೋಗ್ಯ ಉತ್ತಮವಾಗಿರುತ್ತದೆ.

ಇತ್ತೀಚಿನ ದಿನಗಳಲ್ಲಿ ಪರಿಸರ ಹದಗೆಡುತ್ತಿರುವ ಹಿನ್ನೆಲೆಯಲ್ಲಿಯೂ ಡೆಂಗ್ಯು ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಏರಿಕೆಯಾಗುತ್ತಿದೆ. ಜಿಲ್ಲೆಯಲ್ಲಿ ಕಳೆದ ನಾಲ್ಕೈದು ವರ್ಷಗಳಲ್ಲಿ ಡೆಂಗ್ಯು ಪ್ರಕರಣಗಳ ಸಂಖ್ಯೆ ಏರಿಕೆಯಾಗುತ್ತಲೇ ಇದೆ. 2016ನೇ ಸಾಲಿನಲ್ಲಿ ಒಟ್ಟು 96 ಡೆಂಗ್ಯು ಪ್ರಕರಣಗಳು ದೃಢಪಟ್ಟ ಬಗ್ಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿಯ ವರದಿಗಳೇ ತಿಳಿಸುತ್ತವೆ.

ಈ ವರ್ಷದ ಜನವರಿಯಿಂದ ಮೇ ತಿಂಗಳ 25ರವರೆಗೆ ಜಿಲ್ಲೆಯಲ್ಲಿ ದಾಖಲಾಗಿರುವ ಡೆಂಗ್ಯು ಪ್ರಕರಣಗಳನ್ನು ಗಮನಿಸಿದರೆ ತುಮಕೂರಿನಲ್ಲಿಯೇ ಅತೀ ಹೆಚ್ಚು ಪ್ರಕರಣಗಳು ಕಂಡುಬರುತ್ತವೆ. ತುಮಕೂರು ತಾಲ್ಲೂಕಿನಲ್ಲಿ 19 ಪ್ರಕರಣಗಳು, ಮಧುಗಿರಿಯಲ್ಲಿ 1, ಶಿರಾದಲ್ಲಿ 2, ಕುಣಿಗಲ್ ಮತ್ತು ಸಿ.ಎನ್.ಹಳ್ಳಿಯಲ್ಲಿ ತಲಾ 1, ತಿಪಟೂರಿನಲ್ಲಿ 2 ಪ್ರಕರಣಗಳು ಸೇರಿ ಒಟ್ಟು ಈ 5 ತಿಂಗಳ ಅವಧಿಯಲ್ಲಿ 26 ಡೆಂಗ್ಯು ಪ್ರಕರಣಗಳು ದೃಢಪಟ್ಟಿವೆ. ಇವು ಅಧಿಕೃತವಾಗಿ ಇಲಾಖೆಯಲ್ಲಿ ದಾಖಲಾಗಿರುವ ಅಂಕಿ–ಅಂಶಗಳು.

ಇದೇ ಅವಧಿಯಲ್ಲಿ ಜಿಲ್ಲೆಯಲ್ಲಿ ಒಟ್ಟು 19 ಚಿಕುಂಗುನ್ಯಾ ಪ್ರಕರಣಗಳು ದೃಢಪಟ್ಟಿವೆ. ಇಲ್ಲಿಯೂ ಸಹ ತುಮಕೂರು ಪ್ರಥಮ ಸ್ಥಾನದಲ್ಲಿದೆ. ಒಟ್ಟು 12 ಪ್ರಕರಣಗಳು ತುಮಕೂರು ತಾಲ್ಲೂಕಿನಲ್ಲಿ ವರದಿಯಾಗಿದ್ದರೆ, ಗುಬ್ಬಿ ತಾಲ್ಲೂಕಿನಲ್ಲಿ 3, ಶಿರಾ ತಾಲ್ಲೂಕಿನಲ್ಲಿ 2, ಮಧುಗಿರಿ ಮತ್ತು ಸಿ.ಎನ್.ಹಳ್ಳಿಯಲ್ಲಿ ತಲಾ ಒಂದೊಂದು ಪ್ರಕರಣಗಳು ಚಿಕುಂಗುನ್ಯಾ ದೃಢಪಟ್ಟಿವೆ. ಜಿಲ್ಲೆಯಲ್ಲಿ ಒಟ್ಟು 6 ಪ್ರಕರಣಗಳು ಮಲೇರಿಯಾ ಪೀಡಿತರು ಎಂಬುದು ಖಚಿತವಾಗಿದೆ.

ಈ ಪ್ರಕರಣಗಳು ಮಾತ್ರವಲ್ಲದೆ, ಖಾಸಗಿಯಾಗಿ ದಾಖಲಾಗಿ ಹೋಗುವ, ಸರ್ಕಾರಿ ಆಸ್ಪತ್ರೆಗಳ ಗಮನಕ್ಕೆ ಬಾರದ ಹಾಗೂ ಬಹಿರಂಗವಾಗದ ಎಷ್ಟೋ ಪ್ರಕರಣಗಳು ಇರಬಹುದು. ಇವೆಲ್ಲವೂ ಬಹಿರಂಗಕ್ಕೆ ಬಂದರೆ ಇನ್ನೂ ಪ್ರಕರಣಗಳು ಹೆಚ್ಚಾಗುವ

ಈ ವರ್ಷದ ಜನವರಿಯಿಂದ ಮೇ ತಿಂಗಳ 25ರವರೆಗೆ ಜಿಲ್ಲೆಯಲ್ಲಿ ದಾಖಲಾಗಿರುವ ಡೆಂಗ್ಯು ಪ್ರಕರಣಗಳನ್ನು ಗಮನಿಸಿದರೆ ತುಮಕೂರಿನಲ್ಲಿಯೇ ಅತೀ ಹೆಚ್ಚು ಪ್ರಕರಣಗಳು ಕಂಡುಬರುತ್ತವೆ. ತುಮಕೂರು ತಾಲ್ಲೂಕಿನಲ್ಲಿ 19 ಪ್ರಕರಣಗಳು, ಮಧುಗಿರಿಯಲ್ಲಿ 1, ಶಿರಾದಲ್ಲಿ 2, ಕುಣಿಗಲ್ ಮತ್ತು ಸಿ.ಎನ್.ಹಳ್ಳಿಯಲ್ಲಿ ತಲಾ 1, ತಿಪಟೂರಿನಲ್ಲಿ 2 ಪ್ರಕರಣಗಳು ಸೇರಿ ಒಟ್ಟು ಈ 5 ತಿಂಗಳ ಅವಧಿಯಲ್ಲಿ 26 ಡೆಂಗ್ಯು ಪ್ರಕರಣಗಳು ದೃಢಪಟ್ಟಿವೆ. ಇವು ಅಧಿಕೃತವಾಗಿ ಇಲಾಖೆಯಲ್ಲಿ ದಾಖಲಾಗಿರುವ ಅಂಕಿ-ಅಂಶಗಳು.

ಇದೇ ಅವಧಿಯಲ್ಲಿ ಜಿಲ್ಲೆಯಲ್ಲಿ ಒಟ್ಟು 19 ಚಿಕುಂಗುನ್ಯಾ ಪ್ರಕರಣಗಳು ದೃಢಪಟ್ಟಿವೆ. ಇಲ್ಲಿಯೂ ಸಹ ತುಮಕೂರು ಪ್ರಥಮ ಸ್ಥಾನದಲ್ಲಿದೆ. ಒಟ್ಟು 12 ಪ್ರಕರಣಗಳು ತುಮಕೂರು ತಾಲ್ಲೂಕಿನಲ್ಲಿ ವರದಿಯಾಗಿದ್ದರೆ, ಗುಬ್ಬಿ ತಾಲ್ಲೂಕಿನಲ್ಲಿ 3, ಶಿರಾ ತಾಲ್ಲೂಕಿನಲ್ಲಿ 2, ಮಧುಗಿರಿ ಮತ್ತು ಸಿ.ಎನ್.ಹಳ್ಳಿಯಲ್ಲಿ ತಲಾ ಒಂದೊಂದು ಪ್ರಕರಣಗಳು ಚಿಕುಂಗುನ್ಯಾ ದೃಢಪಟ್ಟಿವೆ. ಜಿಲ್ಲೆಯಲ್ಲಿ ಒಟ್ಟು 6 ಪ್ರಕರಣಗಳು ಮಲೇರಿಯಾ ಪೀಡಿತರು ಎಂಬುದು ಖಚಿತವಾಗಿದೆ.

ನೀರಿನ ತಾಣಗಳನ್ನು ವಾರಕ್ಕೊಮ್ಮೆ ಖಾಲಿ ಮಾಡಿ ಚೆನ್ನಾಗಿ ಉಜ್ಜಿ ತೊಳೆದು ಒಣಗಿಸಬೇಕು. ಮಳೆಗಾಲದಲ್ಲಿ ನಿಲ್ಲುವ ನೀರನ್ನು ಗಮನಿಸುತ್ತಿರಬೇಕು. ಸುತ್ತಮುತ್ತ ನೀರು ನಿಂತಿರುವುದನ್ನು ಪರಿಶೀಲಿಸಿ ಆ ನೀರು ಹರಿದು ಹೋಗುವಂತೆ ಮಾಡಬೇಕು. ಸೊಳ್ಳೆಗಳ ನಿಯಂತ್ರಣಕ್ಕೆ ಕ್ರಮ ವಹಿಸಿದರೆ ರೋಗಗಳು ಕಡಿಮೆಯಾಗುತ್ತವೆ ಎನ್ನುತ್ತಾರೆ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಎಚ್.ವೀಣಾ.

ಸೊಳ್ಳೆಗಳ ನಿಯಂತ್ರಣ ಅಗತ್ಯ

ಡೆಂಗ್ಯು ನಿಯಂ ತ್ರಣಕ್ಕಾಗಿ ಇಲಾಖೆಯಿಂದ ಲಾರ್ವ ಸಮೀಕ್ಷೆ ಮತ್ತು ಇತರೆ ಸೊಳ್ಳೆ ನಿಯಂತ್ರಣ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಸಾರ್ವಜನಿಕರು ತಮ್ಮ ಮನೆಯ ಸುತ್ತ ನೀರು ನಿಲ್ಲಲು ಅವಕಾಶವಾಗದಂತೆ ನೋಡಿಕೊಳ್ಳಬೇಕು. ಸೊಳ್ಳೆಗಳ ಉತ್ಪತ್ತಿಯೇ ರೋಗಗಳಿಗೆ ಕಾರಣವಾಗುವುದರಿಂದ ಇವುಗಳನ್ನು ತಡೆಗಟ್ಟುವುದೇ ಮದ್ದು ಎನ್ನುತ್ತಾರೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ರಂಗಸ್ವಾಮಿ.

ಹಾವು ಕಡಿದು ಸಾವು

ತುಮಕೂರು

ತುಮಕೂರು ತಾಲ್ಲೂಕು ಗೂಳೂರು ಹೋಬಳಿ ಹೊನ್ನುಡಿಕೆ ಗ್ರಾಮದ ನಾಗರಾಜು ಎಂಬುವವರಿಗೆ ಮೇ 28 ರಂದು ಮಧ್ಯಾಹ್ನ ಅಡಿಕೆ ತೋಟದಲ್ಲಿ ಹಾವು ಕಚ್ಚಿದ್ದು, ಮೇ 29 ರಂದು ರಾತ್ರಿ ಮೃತಪಟ್ಟಿರುವ ಘಟನೆ ನಡೆದಿದೆ. ಈ ಬಗ್ಗೆ ಮೇ 30 ರಂದು ದೂರು ಸಲ್ಲಿಸಿದ್ದು, ಹೆಬ್ಬೂರು ಪೊಲೀಸ್ ಠಾಣೆಯಲ್ಲಿ ಸಿ.ಆರ್.ಪಿ.ಸಿ. ಕಲಂ 174 ರ ಪ್ರಕಾರ ಮೊಕದ್ದಮೆ ದಾಖಲಾಗಿದೆ.

ಅಭಿನಂದನೆಗಳು
ಎಎಂಆರ್ ಶ್ರೀನಾಥ್ ಮತ್ತು ಮಾಲಾ ಶ್ರೀನಾಥ್‌ರವರ ಮಗಳಾದ
ಕುಮಾರಿ ಶ್ರೀನಿಧಿ
ತನ್ನ ಉನ್ನತ ವ್ಯಾಸಂಗಕ್ಕಾಗಿ ಅಮೇರಿಕಾದ ಫ್ಲೋರಿಡಾ ದೇಶಕ್ಕೆ ತೆರಳುತ್ತಿರುವ ಸಂದರ್ಭದಲ್ಲಿ ಇವರ ಮುಂದಿನ ಉನ್ನತ ಮಟ್ಟದ ವ್ಯಾಸಂಗ ಯಶಸ್ವಿಯಾಗಲೆಂದು ಶುಭ ಹಾರೈಸುವ
ಗುರುರಾಜ ಫುಡ್ ಪ್ರಾಡೆಕ್ಟ್ಸ್
ದಿಬ್ಬೂರು ರಸ್ತೆ, ತುಮಕೂರು. 8095977710

ಹೃತ್ಪೂರ್ವಕ ಅಭಿನಂದನೆಗಳು
ಕೆ.ಪಿ.ಸಿ.ಸಿ. ಅಧ್ಯಕ್ಷರಾಗಿ
ನಮ್ಮ ರಾಜ್ಯದ ಹಾಗೂ ಜಿಲ್ಲೆಯ ಧೀಮಂತನಾಯಕ ಹಾಗೂ ದೀನ ದಲಿತರ ಆಶಾಕಿರಣ, ನಮ್ಮ ನೆಚ್ಚಿನ ನಾಯಕರಾದ
ಡಾ|| ಜಿ.ಪರಮೇಶ್ವರರವರನ್ನು
ಆಯ್ಕೆ ಮಾಡಿದ ರಾಷ್ಟ್ರ ಹಾಗೂ ರಾಜ್ಯ ನಾಯಕರುಗಳಿಗೆ ಆತ್ಮೀಯ ಅಭಿನಂದನೆಗಳು
ಹೆಚ್.ಅತೀಕ್ ಅಹಮದ್
ಜಿಲ್ಲಾಧ್ಯಕ್ಷರು, ಕಾಂಗ್ರೆಸ್ ಅಲ್ಪ ಸಂಖ್ಯಾತರ ವಿಭಾಗ
ಗುರುಪ್ರಸಾದ್
ರಾಜ್ಯ ಕಾರ್ಯದರ್ಶಿ, ಕೆ.ಪಿ.ಸಿ.ಸಿ (ಓ.ಬಿ.ಸಿ)
ಬಿ.ಎಸ್.ಪ್ರಸನ್ನಕುಮಾರ್
ಸಂಚಾಲಕರು,ಕೆಪಿಸಿಸಿ (ಎಸ್.ಸಿ.ವಿಭಾಗ) ಹಾಗೂ ಗುಲ್ಬರ್ಗ ಜಿಲ್ಲಾ ವೀಕ್ಷಕರು